6

## ಕರ್ನಾಟಕ ಸರ್ಕಾರ

ಸಂ:ಎಎಲ್‌ಎನ್:(ಎನ್‌ಎವೈ)ಎಸ್‌ಆರ್:48/06-07

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 29-2-2008.

### ಅಧಿಕೃತ ಜ್ಞಾಪನ

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 164/1 ರಲ್ಲಿ 2-18 ಎಕರೆ/ಗುಂಟೆ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಶ್ರೀ. ಬಿ.ಲಿಂಗಪ್ಪ ಬಿನ್ ಬೋರಯ್ಯ, ನಂ. 10, ಲಿಂಗಪ್ಪ ಬ್ಲಾಕ್, ರಾಮಕೃಷ್ಣಯ್ಯ ಬೀದಿ, ಶೇಷಾದ್ರಿಪುರಂ, ಬೆಂಗಳೂರು-10 ರವರು ಸಲ್ಲಿಸಿರುವ ಅರ್ಜಿ ದಿ: 18-9-2006.

ಉಲ್ಲೇಖ:-
1) ತಹಶೀಲ್ದಾರ್,ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ರವರ ವರದಿ ಸಂಖ್ಯೆ ಎಎಲ್‌ಎನ್:ಎಸ್.ಆರ್:152/05-06, ದಿನಾಂಕ : 9-10-2006.
2) ಭೂ ಪರಿವರ್ತನಾ ಶುಲ್ಕ ರೂ. 1,33,403-00 ಹಾಗೂ ಪೋಡಿ ಶುಲ್ಕ ರೂ. 55-00 ಒಟ್ಟು ರೂ. 1,33,458-00 ಗಳನ್ನು ಚಲನ್ ನಂಬರ್ 105 ದಿ: 20-11-2006 ರಂದು ಎಸ್.ಬಿ.ಎಂ. ಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.
3) ಏಕಗವಾಕ್ಷಿ ಸಮಿತಿಯ ನಡವಳಿಕೆಗಳ ದಿನಾಂಕ: 28-10-2006.
4) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರದ ಸಂಖ್ಯೆ.: ಸಂಖ್ಯೆ :ಬೆಂ.ಅ.ಪ್ರಾ:ಅಸ:ತಾಸ-11/ಟಿ-815/07-08. ದಿನಾಂಕ: 15-2-2008.

:: 0 ::

ಶ್ರೀ. ಬಿ.ಲಿಂಗಪ್ಪ ಬಿನ್ ಬೋರಯ್ಯ, ಇವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 164/1 ರಲ್ಲಿ 2-18 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ದಿ: 18-9-2006 ರಂದು ಅರ್ಜಿ ಸಲ್ಲಿಸಿರುವರು. ಸದರಿ ಅರ್ಜಿದಾರರು ಅಗತ್ಯ ಶುಲ್ಕವನ್ನು ಚಲನ್ ಮೂಲಕ ಸಂದಾಯ ಮಾಡಿರುವರು.

ಸದರಿಯವರ ಕೋರಿಕೆಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95 ರ ಮತ್ತು ಅದರಡಿ ಉಪ ಬಂಧಗಳನ್ನು ಒದಲಾದ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ/ಕಾರ್ಪೋರೇಷನ್ ಕಾಯ್ದೆ/ಪಂಚಾಯಿತಿ ಕಾಯ್ದೆಯಲ್ಲಿನ ಹಾಗೂ ಕರ್ನಾಟಕ ಕಂಟ್ರಿ ಟೌನ್ ಪ್ಲಾನಿಂಗ್ ಕಾಯ್ದೆಯಲ್ಲಿನ ಅವಕಾಶಗಳನ್ನು ಅನುಸರಿಸಿ ಪರಿಶೀಲಿಸಲಾಗಿದೆ. ಅರ್ಜಿದಾರರು ಲಭ್ಯಪಡಿಸಿದ ಅಗತ್ಯ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ ಸಂಬಂಧಿತ ಕಾಯ್ದೆ ನಿಯಮಗಳಲ್ಲಿನ ಎಲ್ಲ ಸಂಬಂಧಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಏಕಗವಾಕ್ಷ ಸಮಿತಿಯವರು ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳಲ್ಲಿನ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮನದಟ್ಟು ಮಾಡಿಕೊಂಡಿರುವರು.

ಅರ್ಜಿದಾರರು ಪ್ರಾಧಿಕಾರದ ಅಧಿಕಾರಿಯವರಿಂದ ಅನುಮೋದಿತ ಬಡಾವಣೆ ಯೋಜನೆ ಮತ್ತು ನಕ್ಷೆಯನ್ನು ಸಹ ಸಲ್ಲಿಸಿರುವರು. ಏಕಗವಾಕ್ಷ ಸಮಿತಿಯು ಅರ್ಜಿದಾರರು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತೃಪ್ತಿಹೊಂದಿದ್ದು, ಶ್ರೀ. ಬಿ.ಲಿಂಗಪ್ಪ ಬಿನ್ ಬೋರಯ್ಯ, ಇವರಿಗೆ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 164/1 ರಲ್ಲಿ 2-18 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲಾಗಿದೆ.

1) ಭೂ ಪರಿವರ್ತಿತ ಜಮೀನನ್ನು ಪಾರ್ಕ್ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

2) ಈ ಜಮೀನಿನಲ್ಲಿ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು ಮತ್ತು ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆದಿರುವಂತೆ ನಿಗಧಿಪಡಿಸಿದ ಗಾತ್ರದ ನಿವೇಶನಗಳನ್ನು ಮಾತ್ರ ಪರಭಾರೆ ಮಾಡತಕ್ಕದ್ದು.

3) ಇತರೆ ಅವಶ್ಯವಾದ ರಸ್ತೆ ಜಾಗ, ಮಾರ್ಜಿನ್, ಖಾಲಿ ಜಾಗ, ಇತ್ಯಾದಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಪ್ರದೇಶ ಯೋಜನಾ ಪ್ರಾಧಿಕಾರ,ಬೆಂಗಳೂರು ರವರಿಂದ ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಸಾರ್ವಜನಿಕ ಅನುಕೂಲತೆ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿದ ನಂತರವೇ ನಿವೇಶನಗಳ ಹಂಚಿಕೆ/ಪರಭಾರೆ ಮಾಡತಕ್ಕದು

5) ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಆರ್.ಟಿ.ಸಿ. ದಾಖಲೆಯಂತೆ ಸರ್ವೆ ನಂ. 164/1 ರಲ್ಲಿ 0-02 ಗುಂಟೆ " ಬಿ " ಖರಾಬು ಆಗಿರುತ್ತದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ತಹಶೀಲ್ದಾರರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

6) ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವನ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಕಾದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

7) ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿಸುವ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ಪರಿಸರ ಇಲಾಖೆಗಳ ಅನುಮತಿ ಪಡೆದಿರುವ ರೀತ್ಯ ಅಥವಾ ಷರತ್ತುಗಳನ್ನು ಪೂರೈಸಿದ ನಂತರವೇ ಉಪಯೋಗಿಸಿಕೊಳ್ಳತಕ್ಕದ್ದು.

8) ಸದರಿ ಪಾರ್ಕ್ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಪಾರ್ಕ್ ನಕ್ಷೆಯಲ್ಲಿರುವ ರೀತಿಯೇ ನಿರ್ಮಿಸತಕ್ಕದ್ದು.

9) ಬಡಾವಣೆಯೊಳಗೆ ಅಂತರಿಕ ರಸ್ತೆಗಳನ್ನು ಅಗಲಕ್ಕೆ ಅನುಗುಣವಾಗಿ ಏಕಗವಾಕ್ಷ ಸಮಿತಿಯಲ್ಲಿ ಪ್ರಾಧಿಕೃತ ಇಲಾಖೆಯವರು ಅನುಮೋದನೆ ನೀಡಿರುವಂತೆ ಮಾತ್ರ ನಿರ್ಮಿಸತಕ್ಕದ್ದು.

10) ಸಾರ್ವಜನಿಕ ಉಪಯೋಗಕ್ಕಾಗಿ ನಿಗಧಿಪಡಿಸಲ್ಪಟ್ಟ ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 164/1 ರಲ್ಲಿ 2-18 ಎಕರೆ/ಗುಂಟೆ ಸೇರಿದಂತೆ ಸಲ್ಲಿಸಲಾಗಿರುವ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿರುವ ಈ ಕೆಳಗಿನ ನಿವೇಶನಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.

| PLOT SITE AREA :9614.47 SMT | | |
|---|---|---|
| KARAB AREA | 506.04 | SMT |
| NET SITE AREA | 9108.73 | SMT |
| F.A.R. | 2.237 < | 2.25 |
| COVERAGE | 32.39% < 50% | |
| NO OF UNIT | 182 UNITS | |
| CAR PARKING | 208 CARS | |

11) ನಕ್ಷೆಯಲ್ಲಿ ಅನುಮೋದನೆಗೊಂಡ ಪ್ರದೇಶದ ವಿವರಗಳು ಈ ಕೆಳಕಂಡಂತಿದೆ.

| SCHEDULE OF OPENINGS | | |
|---|---|---|
| TYPE | SIZE | DESCRIPTION |
| MD | 1.10 x 2.10 | FLUSH DOOR |
| D1 | 0.90 x 2.10 | FLUSH DOOR |
| D2 | 0.75 x 2.10 | FLUSH DOOR |
| W | 1.40 x 1.40 | WINDOW |
| V | 0.90 x 0.70 | VENTILATOR |

12) ಭೂ ಪರಿವರ್ತನಾ ಪತ್ರ, ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿ ನಿವೇಶನಗಳನ್ನು ನೋಂದಾವಣೆ ಮಾಡಿಸಿಕೊಡತಕ್ಕದ್ದು.

---3.

13) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

14) ಈ ಅಧಿಕೃತ ಜ್ಞಾಪನವು ಭೂ ಪರಿವರ್ತನೆ ನೀಡಿರುವ ಆದೇಶವೇ ಹೊರತು ಜಮೀನಿನಲ್ಲಿನ ಹಕ್ಕನ್ನು ದೃಢೀಕರಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

<u>ಷೆಡ್ಯೂಲ್ ವಿವರ</u>

ಬೆಂಗಳೂರು ಜಿಲ್ಲೆ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂಬರ್ 164/1 ರಲ್ಲಿ 2-18 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ:

<u>-: ಚೆಕ್ಕುಬಂದಿ :-</u>

| | |
|---|---|
| ಪೂರ್ವಕ್ಕೆ | ಸರ್ವೆ ನಂ. 164/8, 164/3ಎ, 164/2ಎ ರ ಜಮೀನು |
| ಪಶ್ಚಿಮಕ್ಕೆ | ಸರ್ವೆ ನಂ. 165 ರ ಜಮೀನು |
| ಉತ್ತರಕ್ಕೆ | ಸರ್ವೆ ನಂ. 212 ಮತ್ತು ರಸ್ತೆ |
| ದಕ್ಷಿಣಕ್ಕೆ | ಸರ್ವೆ ನಂ. 158 ರ ಜಮೀನು. |

ಸಹಿ/-
(ಶಿವಯೋಗಿ ಸಿ. ಕಳಸದ),
ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.</u>

1) ತಹಶೀಲ್ದಾರರು, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ರವರಿಗೆ ಮೂಲ ಕಡತ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂ. ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ನಗರ ಯೋಜಕ ಸದಸ್ಯರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರಸ್ತೆ, ಬೆಂಗಳೂರು ರವರಿಗೆ.
3) ಅರ್ಜಿದಾರರಾದ ಶ್ರೀ. ಬಿ.ಲಿಂಗಪ್ಪ ಬಿನ್ ಬೋರಯ್ಯ, ನಂ. 10, ಲಿಂಗಪ್ಪ ಬ್ಲಾಕ್, ರಾಮಕೃಷ್ಣಯ್ಯ ಬೀದಿ, ಶೇಷಾದ್ರಿಪುರಂ, ಬೆಂಗಳೂರು-10 ರವರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
4) ಹೆಚ್ಚಿನ ಪ್ರತಿ.

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.

ಕರ್ನಾಟಕ ಸರ್ಕಾರ

ನಂ:ಎ.ಎಲ್.ಎನ್(ಎನ್.ಎ.ವೈ) ಎಸ್.ಆರ್-48/06-07

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿ: 21-11-06

ತಿಳುವಳಿಕೆ ಪತ್ರ

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ(ಅ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸ.ನಂ. 164/1 ರಲ್ಲಿ 2-18 ಎ/ಗು ಜಮೀನನ್ನು ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

-0-

ನೀವು ದಿ: 18-9-2006 ರಂದು ಭೂ ಪರಿತವರ್ತನೆ ಕೋರಿ ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ(ಅ) ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸ.ನಂ. 164/1 ರಲ್ಲಿನ 2-18 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಏಕ ಗವಾಕ್ಷಿ ಸಮಿತಿಯು ದಿ: 28-10-2006 ರ ಸಭೆಯಲ್ಲಿ ಪರಿಶೀಲಿಸಲಾಗಿದೆ ಹಾಗೂ ಈ ಬಾಬ್ತು ಈ ಕೆಳಗೆ [illegible] ಭೂ ಪರಿವರ್ತನಾ ಶುಲ್ಕವನ್ನು ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ 100-00(ರೂಪಾಯಿ ಒಂದು ನೂರು ಮಾತ್ರ) ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್/ಡಿ.ಡಿ ಅನ್ನು 15 ದಿವಸದೊಳಗಾಗಿ ಹಾಜರುಪಡಿಸುವುದು.

2)ಯಾವ ಉದ್ದೇಶಕ್ಕೆ ಭೂ ಪರಿತವರ್ತನೆ ಕೋರಲಾಗಿದೆಯೋ ಆ ಉದ್ದೇಶಕ್ಕೆ ಸರಿಹೊಂದುವ ಬಡಾವಣೆಯ ನಕ್ಷೆ ಹಾಗೂ ರೂಪ ರೇಷೆಗಳಿಗೆ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮೋದನೆ ಪತ್ರ ಹಾಗೂ ಅನುಮೋದಿತ ನಕ್ಷೆಯನ್ನು ಪಡೆದು ಈ ತಿಳುವಳಿಕೆ ಸ್ವೀಕೃತವಾದ ದಿನಾಂಕದಿಂದ 60 ದಿವಸಗಳೊಳಗೆ ತಪ್ಪದೇ ಸಲ್ಲಿಸುವುದು.

3)ನಿಗದಿಪಡಿಸಿದ ಅವಧಿಯಲ್ಲಿ ಭೂ ಪರಿವರ್ತನೆ ಶುಲ್ಕ ಪಾವತಿಸಿದ ಬಗ್ಗೆ ಚಲನ್/ಡಿ.ಡಿ ಮತ್ತು ಕರಾರು ಪತ್ರ, ಅನುಮೋದನೆ ಪತ್ರ, ಮೇಲ್ಕಂಡ ಕಂಡಿಕೆಯಲ್ಲಿ ಬಡಾವಣೆಯ ನಕ್ಷೆ ರೂಪರೇಷೆಗಳಿಗೆ ಸಂಬಂಧಿತ ಪ್ರಾಧಿಕಾರದಿಂದ ಅನುಮೋದಿತ ಪತ್ರ ಹಾಗೂ ಅನುಮೋದಿತ ನಕ್ಷೆ ಹಾಜರುಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಸರ್ವೆ ನಂಬರ್ | ವಿಸ್ತೀರ್ಣ ಎಕರೆ/ಗುಂಟೆ | ಹಣ ಪಾವತಿ ವಿವರ | ಮೊಬಲಗು ರೂ ಪೈಸೆ |
|---|---|---|---|
| 164/1 | 2-18 | 1) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ ರೂ 54.450-00ರಂತೆ | 1,33,403-00 |
| | | 2) ಪೋಡಿ ಶುಲ್ಕ ರೂ | 55-00 |
| ಒಟ್ಟು [illegible] ಲಕ್ಷದ ಮುವತ್ತಮೂರು ಸಾವಿರದ ನಾಲ್ಕುನೂರ ಐವತ್ತೆಂಟು ರೂಗಳು ಮಾತ್ರ | | | 1,33,458-00 |

[illegible] ಜಿಲ್ಲಾಧಿಕಾರಿಗಳ ಪರವಾಗಿ,
ಬೆಂಗಳೂರು ಜಿಲ್ಲೆ,ಬೆಂಗಳೂರು.

ಗೆ,
1.ಶ್ರೀ. ಬಿ.ಲಿಂಗಪ್ಪ ಬಿನ್ ಬೋರಯ್ಯ
ನಂ.10, ಲಿಂಗಪ್ಪ ಬ್ಲಾಕ್, ರಾಮಕೃಷ್ಣಯ್ಯ ಬೀದಿ,
ಶೇಷಾದ್ರಿಪುರಂ,
ಬೆಂಗಳೂರು-560 010